**ಓ.ಎಸ್ಃ 128/2021** **ಪಿಡಬ್ಲೂ–1 ಮಹಿಮ ಕೆ ಎಸ್**

ದಿನಾಂಕಃ 13.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟಿ ಸವಾಲುಃ 3 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ ಎಂ ಎನ್ ಆರ್ ವಕೀಲರಿಂದಃ**

ನಾನು BSc ಪದವಿ ವಿದ್ಯಾಭ್ಯಾಸ ಮಾಡಿರುತ್ತೇನೆ. 3 ಮತ್ತು 4 ನೇ ಪ್ರತಿವಾದಿಯರು ಸಲ್ಲಿಸಿದ ಪ್ರತಿವಾದ ಪತ್ರವನ್ನು ನೋಡಿ ತಿಳಿದುಕೊಂಡಿರುತ್ತೇನೆ. 1 ನೇ ಪ್ರತಿವಾದಿ ಶ್ಯಾಮರಾವ್ ರವರ ಭಾಗಕ್ಕೆ ಬಂದ ಜಮೀನುಗಳ ಸರ್ವೇ ನಂಬರ್ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಶ್ಯಾಮರಾವ್‌ರವರ ಮಕ್ಕಳು ಯಾವ ಸರ್ವೇ ನಂಬರ್ ಗಳ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಶ್ಯಾಮರಾವ್‌ರವರಿಗೆ ಸೇರಿದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. 2 ನೇ ಪ್ರತಿವಾದಿ ಕೆ ನಾಗರಾಜುರವರ ಹೆಂಡತಿ ಮಕ್ಕಳು ಚಾಮರಾಜನಗರದಲ್ಲಿ ವಾಸವಾಗಿರುತ್ತಾರೆ. ಕೆ ಎನ್ ನಾಗರಾಜುರವರ ಹೆಂಡತಿ ಮಕ್ಕಳಿಗೆ ಕೆಂಗಾಕಿ ಗ್ರಾಮದಲ್ಲಿ ಜಮೀನುಗಳು ಇವೆ ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿ ಕೆ ಎನ್ ಚಂದ್ರಶೇಖರ್ ರವರಿಗೆ ಕೆಂಗಾಕಿ ಗ್ರಾಮದಲ್ಲಿ ಜಮೀನುಗಳು ಇರುತ್ತವೆ. 3 ನೇ ಪ್ರತಿವಾದಿ ಕೆ ಎನ್ ಚಂದ್ರಶೇಖರ್ ರವರಿಗೆ ಕೆಂಗಾಕಿ ಗ್ರಾಮದಲ್ಲಿರುವ ಜಮೀನುಗಳು ಪಿತ್ರಾರ್ಜಿತವಾಗಿ ಬಂದಿರುತ್ತವೆ. ಶ್ಯಾಮರಾವ್, ಕೆ ಎನ್ ನಾಗರಾಜು ಮತ್ತು ಕೆ ಎನ್ ಚಂದ್ರಶೇಖರ್ ರವರು ನರಸಿಂಹಮೂರ್ತಿರವರ ಮಕ್ಕಳು ಎಂದರೆ ಸರಿ. ನರಸಿಂಹಮೂರ್ತಿರವರ ಹೆಂಡತಿ ವೆಂಕಟಸುಬ್ಬಮ್ಮರವರ ಸ್ವಯಾರ್ಜಿತ ಆಸ್ತಿಯಾದ ಜಮೀನು ಕೆಂಗಾಕಿ ಗ್ರಾಮದಲ್ಲಿ ಇರುತ್ತದೆ. ವೆಂಕಟಸುಬ್ಬಮ್ಮರವರ ಸ್ವಯಾರ್ಜಿತ ಆಸ್ತಿಯಾದ ಜಮೀನು ಕೆಂಗಾಕಿ ಗ್ರಾಮದಲ್ಲಿ ಇರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ.

ನಿಪಿ 10 ರ ದಾಖಲೆಯಲ್ಲಿ ವೆಂಕಟಸುಬ್ಬಮ್ಮರವರ ಹೆಸರು ನಮೂದಾಗಿಲ್ಲ ಎಂದರೆ ಸರಿ. ಸರ್ವೇ ನಂಬರ್ 346 ರ ಜಮೀನು ವೆಂಕಟಸುಬ್ಬಮ್ಮರವರಿಗೆ ಹೇಗೆ ಬಂತು ಎಂದು ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ವೆಂಕಟಸುಬ್ಬಮ್ಮರವರ ತಾಯಿಯ ಹೆಸರು ರುಕ್ಮಿಣಿಯಮ್ಮ. ರುಕ್ಮಿಣಿಯಮ್ಮರವರ ಹೆಸರಿನಲ್ಲಿದ್ದ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಾನು ಹಾಜರುಪಡಿಸಿರುವ ನಿಪಿ 10 ರ ಆರ್ ಟಿ ಸಿಯ 3ನೇ ಪುಟದಲ್ಲಿ ಬಸಮ್ಮ ಕೋಂ ಪುಟ್ಟನಾಯಕ ಎಂದು ನಮೂದಾಗಿದೆ ಎಂದರೆ ಸರಿ. ಬಸಮ್ಮ ಕೋಂ ಪುಟ್ಟನಾಯಕರವರಿಂದ ವೆಂಕಟಸುಬ್ಬಮ್ಮ ಜಮೀನನ್ನು ಖರೀದಿಸಿದ ಬಗ್ಗೆ ದಾಖಲೆ ಇಲ್ಲ. ವೆಂಕಟಸುಬ್ಬಮ್ಮರವರ ಹೆಸರಿಗೆ ಖಾತೆ ಬದಲಾವಣೆ ಆದ ಬಗ್ಗೆ ದಾಖಲೆ ಇಲ್ಲ. ನಾನು ಹಾಜರುಪಡಿಸಿರುವ ಪಹಣಿ ಪತ್ರಿಕೆಗಳಲ್ಲಿ ಬಸಮ್ಮ ಕೋಂ ಪುಟ್ಟನಾಯಕರವರ ಹೆಸರಿನಲ್ಲಿದ್ದ ಖಾತೆಯು ಶ್ಯಾಮರಾವ್ ರವರ ಹೆಸರಿಗೆ ಬದಲಾವಣೆ ಆಗಿದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲಾತಿಗಳಲ್ಲಿ ದಾವಾ ಆಸ್ತಿಗಳೆಲ್ಲವೂ ಶ್ಯಾಮರಾವ್, ಕೆ ಎನ್ ನಾಗರಾಜು ಮತ್ತು ಕೆ ಎನ್ ಚಂದ್ರಶೇಖರ್ ರವರ ಹೆಸರಿನಲ್ಲಿವೆ ಎಂದರೆ ಸರಿಯಲ್ಲ.

ಈ ದಾವೆಯಲ್ಲಿ ಶ್ಯಾಮರಾವ್ ಮತ್ತು ಕೆ ಎನ್ ನಾಗರಾಜುರವರ ಹೆಸರಿನಲ್ಲಿರುವ ಆಸ್ತಿಗಳನ್ನು ಸೇರಿಸಿಲ್ಲ ಎಂದರೆ ಸರಿ. 3 ಮತ್ತು 4 ನೇ ಪ್ರತಿವಾದಿಯರು ಗಂಡಹೆಂಡತಿಯರಾಗಿದ್ದು ಅವರಿಗೆ ಮಕ್ಕಳಿಲ್ಲದ ಕಾರಣ ಅವರ ಪಾಲಿಗೆ ಬಂದ ದಾವಾ ಆಸ್ತಿಗಳನ್ನು ಲಪಟಾಯಿಸುವ ಸಲುವಾಗಿ ನನ್ನ ಅಜ್ಜಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಚೆಕ್ಕುಬಂಧಿ ನನಗೆ ಗೊತ್ತಿಲ್ಲ ಮತ್ತು ವಾದ ಪತ್ರದಲ್ಲಿ ಚೆಕ್ಕುಬಂಧಿಯನ್ನು ನಮೂದಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ಯಾವಾಗ ಯಾವ ರೀತಿಯಲ್ಲಿ 3 ಮತ್ತು 4 ನೇ ಪ್ರತಿವಾದಿಯರ ಹೆಸರಿಗೆ ಬಂದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ದಾವಾ ಆಸ್ತಿಗಳಲ್ಲಿ ಭಾಗ ಆಗಿಲ್ಲ, 3 ಮತ್ತು 4 ನೇ ಪ್ರತಿವಾದಿಯರು ಮೋಸದಿಂದ ಖಾತೆ ಬದಲಾಯಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಿಃ 10.03.1988 ರಂದು 3 ನೇ ಪ್ರತಿವಾದಿ ಸ್ವಯಾರ್ಜಿತವಾಗಿ

ಖರೀದಿಸಿದ ಜಮೀನು ಸರ್ವೇ ನಂಬರ್ 347/2ಬಿ ರ ಜಮೀನನ್ನು ವಾದ ಪತ್ರದಲ್ಲಿ ಸೇರಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ವೆಂಕಟಸುಬ್ಬಮ್ಮರವರಿಗೆ ಸೇರಿದ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಈಗಾಗಲೇ 1, 2 ಮತ್ತು 3 ನೇ ಪ್ರತಿವಾದಿಯರು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ದಾವಾ ಆಸ್ತಿಗಳ ಸಂಬಂಧ ಬರೆದುಕೊಟ್ಟ ದಾನ ಪತ್ರವನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ಮೋಸದಿಂದ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಜಮೀನುಗಳಲ್ಲಿ 3 ನೇ ಪ್ರತಿವಾದಿಯೇ ಸ್ವಾಧೀನ ಇದ್ದು ಅವರೇ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ನನ್ನ ಅಜ್ಜಿಯ ಕಡೆಯಿಂದ ಸುಳ್ಳು ದಾವೆ ಸಲ್ಲಿಸಿ ನಾನೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಚಾಮರಾಜನಗರ.